KATK900009532022

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತಿಪಟೂರು.**

**ಎಸ್.ಸಿ ಸಂಖ್ಯೆ: 10041/2022**

**ಪ್ರಮಾಣೀಕರಿಸಿದ ದಿನಾಂಕಃ: 20-08-2024**
**ಚಾಸಾ.1**
**ಫ್ರಾಸಾ.1**

| | |
|---|---|
| ಹೆಸರು | ನಂದಿನಿ |
| ಗಂಡನ ಹೆಸರು | ಬಸವರಾಜು |
| ವಯಸ್ಸು | 37 ವರ್ಷ |
| ಉದ್ಯೋಗ | ಮನೆ ಕೆಲಸ |
| ವಾಸಸ್ಥಳ | ಕೋರಗೆರೆ, ಚಿಕ್ಕನಾಯಕನಹಳ್ಳಿ ತಾಲೂಕು |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ರಾಮಚಂದ್ರಯ್ಯ ನನ್ನ ತಂದೆ, ಚರಿತ್ ನನ್ನ ಮಗ. ನನ್ನ ತಂದೆ ರಾಮಚಂದ್ರಯ್ಯನಿಗೆ ಇಬ್ಬರು ಸಹೋದರರು ಮತ್ತು ಇಬ್ಬರು ಸಹೋದರಿಯರು ಇದ್ದರು. ನನ್ನ ತಂದೆಯೇ ದೊಡ್ಡವರು. ನ್ಯಾಯಾಲಯದ ಮುಂದೆ ಇರುವ ಆರೋಪಿ 1 ನನ್ನ ಚಿಕ್ಕಪ್ಪ, ಆರೋಪಿ 2 ನನ್ನ ಚಿಕ್ಕಪ್ಪನ ಮಗ. ನನ್ನ ಚಿಕ್ಕಪ್ಪನಿಗೆ ಮತ್ತೊಬ್ಬ ಶರತ್ ಎಂಬ ಮಗ ಇದ್ದಾನೆ.

ನನ್ನ ತಂದೆಗೆ ನಾವು ಮೂರೂ ಜನ ಹೆಣ್ಣು ಮಕ್ಕಳು ಇದ್ದಿದ್ದರಿಂದ ನಾನು ನನ್ನ ತಂದೆಯನ್ನು ನೋಡಿಕೊಂಡು ನಮ್ಮ ಮನೆಯ ಮನೆಯಲ್ಲಿಯೇ ಮದುವೆ ಆದ ನಂತರವೂ ಸಹ  ಇದ್ದೆ. ನನ್ನ ಪತಿ ಆಗ್ಗಾಗ್ಗೆ ಬರುತ್ತಿದ್ದರು. ದಿಃ 07-02-2021 ರಂದು ಬೆಳಗ್ಗೆ 10 ಗಂಟೆಗೆ ನಮ್ಮ ಜಮೀನಿನ ಬಳಿ ನೀರು ತಿರುವಲು ನಾನು ಹೋಗಿದ್ದೆ. ನಾನು ನಮ್ಮ ಜಮೀನಿಗೆ ಹೋಗುವಷ್ಟರಲ್ಲಿ ನನ್ನ ಚಿಕ್ಕಪ್ಪ ಬಸವರಾಜು ಮತ್ತು ಅವರ ಮಕ್ಕಳು ಶರತ್ ಮತ್ತು ಮಂಜೇಶ್ ಬಾರೇ ಗಿಡಗಳನ್ನು ಕಡಿದು ದಾರಿಗೆ ಅಡ್ಡಲಾಗಿ ಹಾಕಿದ್ದರು ಮುಳ್ಳು ತಂತಿಗಳನ್ನು ಕಡಿದಿದ್ದು, ಗೇಟ್ ವಾಲನ್ನು ಕಟ್ ಮಾಡಿದ್ದರು,

ನೀರು ಬರುತ್ತಿರಲಿಲ್ಲ. ನಾನು ಆರೋಪಿತರನ್ನು ಕೇಳಲಾಗಿ ಜಮೀನು ನಮ್ಮದು ನಿಮ್ಮನ್ನು ಊರು ಬಿಡಿಸಲು ಹೀಗೇ ಮಾಡುತ್ತಾ ಇದ್ದೇವೆ ನೀನು ಎಷ್ಟು ಜನರನ್ನು ಕರೆಸುತ್ತೇಯೋ ಕರೆಸು ಎಂದು ಕೂಗಾಡಿದರು. ಅವಾಚ್ಯ ಶಬ್ದಗಳಿಂದ ಸೂಳೇಮುಂಡೆ ಎಂದು ಬೈದರು. ನಂತರ ನಾನು ನನ್ನ ತಂದೆಗೆ ಪೋನ್ ಮಾಡಿದೆ. ನಾನು ನಮ್ಮ ತಂದೆಗೆ ಪೋನ್ ಮಾಡಿದ್ದರಿಂದ ನನ್ನ ಚಿಕ್ಕಪ್ಪ ಬಸವರಾಜು ಮತ್ತು ಶರತ್ ದೊಣ್ಣೆ ಹಿಡಿದುಕೊಂಡು ಮಂಜೇಶ್ ರಾಡು ಹಿಡಿದುಕೊಂಡು ನನ್ನನ್ನು ಹೊಡೆಯಲು ಬಂದರು, ನಾನು ತಪ್ಪಿಸಿಕೊಂಡು ಓಡಿದೆ, ಅವರು ಅಟ್ಟಿಸಿಕೊಂಡು ಬಂದು ಹೊಡೆದರು, ಆಗ ನನ್ನ ತಂದೆ ಮತ್ತು ನನ್ನ ಮಗ ಚರಿತ್ ಬಂದರು, ನನ್ನ ತಂದೆ ಪ್ರಶ್ನೆ ಮಾಡಿದರು ಆಗ ಆರೋಪಿತರು ಅದೆಲ್ಲಾ ಅವರ ಆಸ್ತಿ, ಸೂಳೇ ಮಗನೆ ಮಗನೇ, ಹೆಣ್ಣು ಮಕ್ಕಳಿಗೆ ಆಸ್ತಿ ಬರೆಯಲು ಇದೆಲ್ಲಾ ಮಾಡುತ್ತಾ ಇದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ನನ್ನ ತಂದೆಯನ್ನು ಹೊಡೆದರು. ಬಸವರಾಜು ನನ್ನ ತಂದೆಯ ಹಿಂದಿನಿಂದ ಬೆನ್ನಿಗೆ ಹೊಡೆದು ಆಗ ನನ್ನ ತಂದೆ ಕೆಳಗೆ ಬಿದ್ದರು ಕಾಲಿಗೆ ಶರತ್ ದೊಣ್ಣೆಯಿಂದ ಹೊಡೆ. ಆಗ ಬಸವರಾಜು ಇವನು ಇದ್ದರೆ ಆಸ್ತಿ ಇವನದ್ದು ಆಗುತ್ತೆ ಇಲ್ಲದಿದ್ದರೆ ನಮ್ಮದು ಆಗುತ್ತೆ ಆದ್ದರಿಂದ ಇವನನ್ನು ಮುಗಿಸಿಬಿಡಿ ಎಂದು ಹೇಳಿದರು. ಆಗ ನನ್ನ ತಂದೆಯ ತಲೆಗೆ ಮಂಜೇಶ್ ರಾಡಿನಿಂದ ಹೊಡೆಯಲು ಹೋದ, ಆಗ ನಾನು ಕೈ ಅಡ್ಡಕೊಟ್ಟೆ ನನ್ನ ಬಲಹೆಬ್ಬೆರಳಿಗೆ ಗಾಯ ಆಯಿತು. ಶರತ್ ಮತ್ತು ಬಸವರಾಜು ನನ್ನ ಹಿಂದಿನಿಂದ ದೊಣ್ಣೆಯಲ್ಲಿ ನನ್ನ ಬೆನ್ನು, ಮೊಣಕಾಲು, ಮೀನುಖಂಡಕ್ಕೆ ಹೊಡೆಯುತ್ತಾ ಇದ್ದರು. ನನ್ನ ಮಗ ಪೋಟೋ ತೆಗೆದಿದ್ದನ್ನು ನೋಡಿ ಅವನನ್ನು ಓಡಿಸಿಕೊಂಡು ಹೋದರು ಅವನಿಗೆ ಬಸವರಾಜು ದೊಣ್ಣೆಯಿಂದ ಎಡಭುಜಕ್ಕೆ ತೋಳಿಗೆ, ಬೆನ್ನಿಗೆ ಹೊಡೆದರು. ಶರತ್, ಮಂಜೇಶ್ ನನ್ನ ಬಟ್ಟೆಯೆಲ್ಲಾ ಹರಿದು ಮಾನ ಕಳೆದರು. ನನ್ನ ಮಗ ತಪ್ಪಿಸಿಕೊಂಡು ಹೋಗಿ ಮಹಾಲಿಂಗಯ್ಯ ಎನ್ನುವವರಿಗೆ ಪೋನ್ ಮಾಡಿದ. ಮಹಾಲಿಂಗಯ್ಯ ಮತ್ತು ಕುಮಾರಯ್ಯ ಬಂದರು, ಅವರು ಬರುವುದನ್ನು ನೋಡಿ ದೊಣ್ಣೆ ಮತ್ತು ರಾಡನ್ನು ಎಸೆದು ಆರೋಪಿತರು ಹೊರಟು ಹೋದರು. ನನಗೆ ಬೆನ್ನಿಗೆ, ಮೊಣಕಾಲಿಗೆ ಎಲ್ಲಾ ಗಾಯ ಆಗಿತ್ತು ಎಲ್ಲಾ ಗಾಯ ಆಗಿದ್ದು ಎದ್ದೇಳಲು ಆಗುತ್ತಾ ಇರಲಿಲ್ಲ ಬಲಗೈ ಹೆಬ್ಬೆರಳಿಗೆ ಬೆರಳಿಗೆ ಗಾಯ ಆಗಿತ್ತು, ಬಟ್ಟೆಯೆಲ್ಲಾ ರಕ್ತ ಕಲೆಯಾಗಿತ್ತು, ಕುಮಾರಯ್ಯ ಮತ್ತು ಮಹಾಲಿಂಗಯ್ಯ ನನ್ನನ್ನು ಮಹಾಲಿಂಗಯ್ಯನ ಬೈಕಿನಲ್ಲಿ ಕೂರಿಸಿಕೊಂಡು ನಮ್ಮ ಮನೆಯ ಬಳಿ ಕರೆದುಕೊಂಡು ಹೋದರು. ನನ್ನ ಬೈಕಿನಲ್ಲಿ ನನ್ನ ತಂದೆಯನ್ನು ಮತ್ತು ಮಗನನ್ನು

ಯಾರೋ ಕರೆದುಕೊಂಡು ಬಂದರು. ಮನೆಯ ಬಳಿ ನನ್ನ ತಂದೆ ಭೈರೇಶ ಎಂಬುವವರಿಗೆ ಆಟೋಗಾಗಿ ಪೋನ್ ಮಾಡಿದರು, ಅವರು ಬಂದು ನಮ್ಮನ್ನು ಹುಳಿಯಾರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಹುಳಿಯಾರಿನಲ್ಲಿ ವೈದ್ಯರು ಇರಲಿಲ್ಲ. ಅಷ್ಟರಲ್ಲಿ ನನ್ನ ತಂಗಿ ಕಾರಿನಲ್ಲಿ ಬಂದ್ಲು ಆಗ ಅವರ ಕಾರಿನಲ್ಲಿ ಚಿಕ್ಕನಾಯಕನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇವೆ. ಅಲ್ಲಿ 13 ದಿನ ಒಳರೋಗಿಯಾಗಿ ಮೂರೂ ಜನ ಚಿಕಿತ್ಸೆ ಪಡೆದಿದ್ದೇವೆ. ಆ ದಿನ ಪೊಲೀಸ್ ರವರು ಆಸ್ಪತ್ರೆಗೆ ಬಂದು ನನ್ನ ತಂದೆಯಿಂದ ಹೇಳಿಕೆಯನ್ನು ಪಡೆದರು. ಪುನಃ ನನ್ನ ಹೇಳಿಕೆಯನ್ನು ದಿಃ 14-02-2021 ರಂದು ಮಧ್ಯಾಹ್ನ 12-30 ಗಂಟೆ ತೆಗೆದುಕೊಂಡರು. ಅದೇ ಸಮಯದಲ್ಲಿ ಮಹಜರ್ ಮಾಡಿ ನಾನು ಗಲಾಟೆ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಅಂದರೆ ಪ್ಯಾಂಟ್ ಮತ್ತು ಟೀಷರ್ಟ ಪೊಲೀಸ್ ರವರು ಮಹಜರ್ ಮಾಡಿ ಅಮಾನತ್ತು ಪಡಿಸಿಕೊಂಡು ಹೋದರು. ಪ್ಯಾಂಟ್ ರಕ್ತ ಆಗಿತ್ತು, ಟೀ ಷರ್ಟ ಹಿಂದೆ ಹರಿದಿದ್ದು. ಟೀ ಷರ್ಟ ಸಹ ಹರಿದಿತ್ತು. ಈ ಎರಡನ್ನೂ ಪ್ರತ್ಯೇಕವಾದ 2 ಬಿಳಿ ಬ್ಯಾಗುಗಳಲ್ಲಿ ಹಾಕಿ ಪ್ಯಾಕ್ ಮಾಡಿಕೊಂಡು ಆಂಗ್ಲ ಭಾಷೆ **ಇ** ಎಂಬ ಅಕ್ಷರದಿಂದ ಸೀಲು ಮಾಡಿದರು. ನನ್ನ ಬಲಗೈನ ಹೆಬ್ಬೆರಳು ಗಾಯ ಆಗಿದ್ದರಿಂದ ಸಹಿ ಮಾಡಲು ಆಗುತ್ತಾ ಇರಲಿಲ್ಲ, ಆದ್ದರಿಂದ ನನ್ನ ಎಡಗೈ ಹೆಬ್ಬೆಟ್ಟನ್ನು ಹಾಕಿದ್ದೆ. ಮಹಜರ್ ಗೆ ಈಶ್ವರಯ್ಯ ಮತ್ತು ಚಂದ್ರಯ್ಯ ಸಹಿ ಮಾಡಿದರು. ಈಗ ನೋಡಿದ್ದು ಸದರಿ ಮಹಜರ್ (ಸಾಕ್ಷಿ ಮಹಜರನ್ನು ಗುರುತಿಸಿದ್ದು ನಿಪಿ-1 ಎಂದು ಗುರುತಿಸಲಾಯಿತು). ಈಗ ನೋಡಿದ್ದು ನನ್ನ ಸಹಿ (ಸಾಕ್ಷಿ ಮಹಜರ್ ನಲ್ಲಿನ ಒಂದು ಸಹಿಯನ್ನು ಗುರುತಿಸಿದ್ದು ನಿಪಿ-1(ಎ) ಎಂದು ಗುರುತಿಸಲಾಯಿತು). (ಮಾನ್ಯ ಅಭಿಯೋಜಕರು ಎಫ್ ಎಸ್ ಎಲ್ ನಿಂದ ಬಂದಂತಹ ಸೀಲು ಅದ 2 ಚೀಲಗಳನ್ನು ಒಡೆದು ಅದರೊಳಗಿರುವ ವಸ್ತುಗಳನ್ನು ಸಾಕ್ಷಿಗೆ ತೋರಿಸಲು ಅನುಮತಿಯನ್ನು ಕೋರಿದ್ದಾರೆ. ನೀಡಿದೆ. ಚೀಲಗಳನ್ನು ಮತ್ತು ಅವುಗಳ ಮೇಲಿನ ಸೀಲುಗಳನ್ನು ಪರಿಶೀಲಿಸಲಾಗಿ ಮಾದರಿ ಸೀಲಿಗೆ ತಾಳೆಯಾಗುತ್ತಿದ್ದು ಸುಸ್ಥಿತಿಯಲ್ಲಿವೆ. ಚೀಲಗಳನ್ನು ಒಡೆದು ಅದರೊಳಗಿರುವ ವಸ್ತುಗಳನ್ನು ಸಾಕ್ಷಿಗೆ ತೋರಿಸಲಾಯಿತು). ಈಗ ನೋಡಿದ್ದು ಆ ದಿನ ಅಮಾನತ್ತು ಪಡಿಸಿಕೊಂಡ ನನ್ನ ಟೀ ಷರ್ಟ, (ಸಾಕ್ಷಿ ಗುರುತಿಸಿದ್ದು ಎಂಓ-1 ಎಂದು ಗುರುತಿಸಲಾಯಿತು). ಈಗ ನೋಡಿದ್ದು ಆ ದಿನ ಅಮಾನತ್ತು ಪಡಿಸಿಕೊಂಡ ನನ್ನ ಪ್ಯಾಂಟ್ , (ಸಾಕ್ಷಿ ಗುರುತಿಸಿದ್ದು ಎಂಓ-2 ಎಂದು ಗುರುತಿಸಲಾಯಿತು). ಪೊಲೀಸ್ ಠಾಣೆಯಲ್ಲಿ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಚಿಕ್ಕನಾಯಕನಹಳ್ಳಿ ನ್ಯಾಯಾಲಯದ

ನ್ಯಾಯಾಧೀಶರ ಮುಂದೆ ದಿಃ 08-04-2021 ರಂದು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಹೇಳಿಕೆ ಕೊಡುವಾಗ ಘಟನೆಯ ಎಲ್ಲಾ ವಿಚಾರಗಳನ್ನು ತಿಳಿಸಿದ್ದೇನೆ. ಈಗ ನೋಡಿದ್ದು ನ್ಯಾಯಾಧೀಶರ ಮುಂದೆ ಕೊಟ್ಟಂತಹ ಹೇಳಿಕೆ (ಸಾಕ್ಷಿ ಗುರುತಿಸಿದ್ದು ನಿಪಿ-2 ಎಂದು ಗುರುತಿಸಲಾಯಿತು). ಇವು ನನ್ನ ಸಹಿಗಳು ಸಾಕ್ಷಿ ಗುರುತಿಸಿದ್ದು ನಿಪಿ-2(ಎ) ಯಿಂದ (ಸಿ) ಎಂದು ಗುರುತಿಸಲಾಯಿತು. ಗಲಾಟೆ ಸಂದರ್ಭದಲ್ಲಿ ನನ್ನ ಮಗ ನನ್ನ ತಂದೆಯ ಮೊಬೈಲ್ ನಿಂದ ಫೋಟೋ ಮತ್ತು ವೀಡಿಯೋ ತೆಗೆದಿದ್ದ. ಅದನ್ನು ನನ್ನ ತಂದೆ ಪೊಲೀಸ್ ನವರಿಗೆ ಕೊಟ್ಟಿದ್ದಾರೆ.

ಆರೋಪಿತರು ಹಲ್ಲೆಗೆ ಬಳಸಿದ ದೊಣ್ಣೆಗಳು ಮತ್ತು ರಾಡನ್ನು ನೋಡಿದರೆ ಗುರುತಿಸುತ್ತೇನೆ. (ಮಾನ್ಯ ಅಭಿಯೋಜಕರು ಎಫ್ ಎಸ್ ಎಲ್ ನಿಂದ ಬಂದಂತಹ ಸೀಲು ಅದ 3 ಚೀಲಗಳನ್ನು ಒಡೆದು ಅದರೊಳಗಿರುವ ವಸ್ತುಗಳನ್ನು ಸಾಕ್ಷಿಗೆ ತೋರಿಸಲು ಅನುಮತಿಯನ್ನು ಕೋರಿದ್ದಾರೆ. ನೀಡಿದೆ. ಚೀಲಗಳನ್ನು ಮತ್ತು ಅವುಗಳ ಮೇಲಿನ ಸೀಲುಗಳನ್ನು ಪರಿಶೀಲಿಸಲಾಗಿ ಮಾದರಿ ಸೀಲಿಗೆ ತಾಳೆಯಾಗುತ್ತಿದ್ದು ಸುಸ್ಥಿತಿಯಲ್ಲಿವೆ. ಚೀಲಗಳನ್ನು ಒಡೆದು ಅದರೊಳಗಿರುವ ವಸ್ತುಗಳನ್ನು ಸಾಕ್ಷಿಗೆ ತೋರಿಸಲಾಯಿತು). ಈಗ ನೋಡಿದ್ದು ಬಸವರಾಜು ಮತ್ತು ಶರತ್ ಹಲ್ಲೆಗೆ ಬಳಸಿದ ದೊಣ್ಣೆಗಳು, ಸಾಕ್ಷಿ 2 ದೊಣ್ಣೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುದ್ದೆಮಾಲು 3 ಮತ್ತು 4 ಎಂದು ಗುರುತಿಸಲಾಯಿತು. ಮಂಜೇಶ್ ಹಲ್ಲೆಗೆ ಬಳಸಿದ ರಾಡು ಇಲ್ಲಿದೆ (ಸಾಕ್ಷಿ ಗುರುತಿಸಿದ್ದು ನಿಪಿ-5 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ನನ್ನ ಚಿಕ್ಕಪ್ಪ ಮತ್ತು ಬಸವರಾಜು ಇದಾರೆ ಸಾಕ್ಷಿ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಮುಂದುವರೆದ ಮುಖ್ಯ ವಿಚಾರಣೆಯನ್ನು ಊಟದ ಸಮಯವಾದ್ದರಿಂದ ಮುಂದೂಡಲಾಯಿತು.**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**

***4* ಗಂಟೆ *20* ನಿಮಿಷ**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ**

ಆರೋಪಿತರು ಹೊಡೆದು ಹೋಗುವಾಗ ನಮ್ಮನ್ನು ಸುಮ್ಮನೆ ಬಿಡುವುದಿಲ್ಲವೆಂದು ನಮ್ಮ ತಂದೆಯನ್ನು ಕೊಲೆ ಮಾಡುತ್ತಾರೆಂದು, ನಾವು ಹೆಣ್ಣು ಮಕ್ಕಳನ್ನು ಊರು ಬಿಟ್ಟು ಓಡಿಸುತ್ತಾರೆಂದು, ನಂತರ ಆಸ್ತಿಯನ್ನು ಅವರೇ ತೆಗೆದುಕೊಳ್ಳುತ್ತಾರೆಂದು ಹೇಳಿ ಹೋದರು. ನನ್ನ ಮಗ ತೆಗೆದ ಪೋಟೋಗಳನ್ನು ಮತ್ತು ಮಾಡಿದ ವೀಡಿಯೋ ಚಿತ್ರೀಕರಣವನ್ನು ನೋಡಿದರೆ ಗುರುತಿಸುತ್ತೇನೆ. ಶರತ್ ನನ್ನು ನೋಡಿದರೆ ಗುರುತಿಸುತ್ತೇನೆ. ಈ ಪೋಟೋಗಳನ್ನು ನಾನು ಆಸ್ಪತ್ರೆಯಲ್ಲಿದ್ದಾಗ ತೆಗೆದಿದ್ದು, ನನಗೆ ಕಾಲಿಗೆ, ಕೈ ಬೆರಳಿಗೆ ಗಾಯಗಳಾಗಿರುವ ದೃಶ್ಯವನ್ನು ಸೆರೆ ಹಿಡಿದಿದ್ದಾರೆ. ಹಾಗೆ ಚಿಕಿತ್ಸೆ ಕೊಡುತ್ತಾ ಇರುವುದನ್ನು ಸಹ ಸೆರೆ ಹಿಡಿದಿದ್ದಾರೆ. (ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂನ. *65*(ಬಿ) ಅಡಿಯ ಪ್ರಮಾಣ ಪತ್ರವನ್ನು ಹಾಜರು ಪಡಿಸುವ ಷರತ್ತಿನ ಮೇರೆಗೆ ಪೋಟೋಗಳನ್ನು ಗುರುತಿಸಲು ಅನುಮತಿಸಲಾಯಿತು). ಇವು ಕಾಲಿಗೆ ಗಾಯ ಆಗಿರುವ ಪೋಟೋಗಳು, ಸಾಕ್ಷಿ ಗುರುತಿಸಿದ್ದು ನಿಪಿ-*3* ಮತ್ತು *4* ಎಂದು ಗುರುತಿಸಲಾಯಿತು. ಇದು ಕೈಯಿಗೆ ಆದಂತಹ ಗಾಯಗಳನ್ನು ಸಾಕ್ಷಿ ಗುರುತಿಸಿದ್ದು ನಿಪಿ-*5* ರಿಂದ *7* ಎಂದು ಗುರುತಿಸಲಾಯಿತು. ಚಿಕಿತ್ಸೆ ಪಡೆಯುತ್ತಿರುವ ಪೋಟೋವನ್ನು ಸಾಕ್ಷಿ ಗುರುತಿಸಿದ್ದು ನಿಪಿ-*8* ಎಂದು ಗುರುತಿಸಲಾಯಿತು. ಇದು ನನ್ನ ಮಗನಿಗೆ ಕೈಯಿಗೆ ಆಗಿರುವ ಗಾಯದ ಪೋಟೋ ಸಾಕ್ಷಿ ಗುರುತಿಸಿದ್ದು ನಿಪಿ-*9* ಮತ್ತು *10* ಎಂದು ಗುರುತಿಸಲಾಯಿತು. ಇದು ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವ ಪೋಟೋ ನಿಪಿ-*11* ಎಂದು ಗುರುತಿಸಲಾಯಿತು. ಈ ಪೋಟೋಗಳನ್ನು ನನ್ನ ಮಗ ಘಟನೆಯ ಸಂದರ್ಭದಲ್ಲಿ ತೆಗೆದಿದ್ದು. (ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ. *65*(ಬಿ) ಅಡಿಯ ಪ್ರಮಾಣ ಪತ್ರವನ್ನು ಹಾಜರು ಪಡಿಸುವ ಷರತ್ತಿನ ಮೇರೆಗೆ ಪೋಟೋಗಳನ್ನು ಗುರುತಿಸಲು ಅನುಮತಿಸಿ ನಿಪಿ-*12* ರಿಂದ *15* ಎಂದು ಗುರುತಿಸಲಾಯಿತು). ಈ ಪೋಟೋಗಳಲ್ಲಿ ಶರತ್ ದೊಣ್ಣೆ ಹಿಡಿದು ನಿಂತಿದ್ದಾನೆ.

**ಪಾಟೀ ಸವಾಲು ಶ್ರೀ ಟಿ ಜಿ ಎಸ್ ವಕೀಲರಿಂದಃ**

ನಾನು ಸೆಕೆಂಡ್ ಪಿಯು ವರೆಗು ವಿದ್ಯಾಭ್ಯಾಸ ಮಾಡಿರುತ್ತೇನೆ. ಜಮೀನು ನನ್ನ ಮೂಲತಹ ನನ್ನ ತಾತ ಬೋರಪ್ಪನಿಗೆ ಸೇರಿತ್ತು. ನನ್ನ ತಾತನಿಗೆ ಹೇಗೆ ಜಮೀನು ಬಂತೋ ಗೊತ್ತಿಲ್ಲ. ಜಮೀನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಯಾರ ಹೆಸರಿನಲ್ಲಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಜಮೀನಿನ ಪತ್ರಗಳನ್ನು ನಾನು ಪರಿಶೀಲನೆ ಮಾಡಿಲ್ಲ. ಜಮೀನು ಚನ್ನಮ್ಮ ಕೋಂ ಬೋರಪ್ಪ ರವರ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ ಆದರೆ ಆ ಜಮೀನು ನನ್ನ ತಾತನದು ಎಂದು ಮಾತ್ರ ನನ್ನ ಗೊತ್ತಿದೆ. ಒಟ್ಟು *25* ಎಕರೆ ಆರೋಪಿತರಿಗೆ ಹೋಗಿದೆ ನಮಗೆ *14* ಎಕರೆ ಕೊಟ್ಟಿದ್ದಾರೆ. ಸರ್ವೆ ನಂ. *14/1 3* ಎಕರೆ *8* ಗುಂಟೆ ನನ್ನ ಅಜ್ಜಿ ಚನ್ನಮ್ಮನಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಜಮೀನಿಗೆ ಸಂಬಂಧಿಸಿದಂತೆ ನನ್ನ ಅಜ್ಜಿ ಮಂಜೇಶನಿಗೆ ದಾನಪತ್ರ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಂಜೇಶ್ ಹೆಸರಿಗೆ ಪಹಣಿ ಮತ್ತು ಖಾತೆ ಎಲ್ಲಾ ಬದಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ನೀರು ತಿರುವಲು ಹೋಗಿದ್ದೆ ಎಂದು ಹೇಳಿದ್ದು ಇದೇ ಜಮೀನಿನಲ್ಲಿ ಎಂದರೆ ಸರಿ. ಈ ಜಮೀನಿನ ಸ್ವಾಧೀನದಲ್ಲಿ ಮಂಜೇಶ್ ಇದ್ದರು ಎಂದರೆ ಸರಿಯಲ್ಲ. ಈ ಜಮೀನಿನ ಚೆಕ್ಕುಬಂಧಿ ನನಗೆ ಹೇಳಲು ಗೊತ್ತಾಗಲ್ಲ ಆದರೆ ಒಂದು ದಿಕ್ಕಿಗೆ ಆರೋಪಿತರು ಇದ್ದಾರೆ. ಸರ್ವೆ ನಂ. *14/1* ರಲ್ಲಿ ಬೋರ್ ವೆಲ್ ಇಲ್ಲ ಪೈಪ್ ಲೈನ್ ಇದೆ. ಜಮೀನುಗಳಿಗೆ ಸಂಬಂಧಿಸಿದಂತೆ ಸಿವಿಲ್ ದಾವೆಗಳು ಚಿಕ್ಕನಾಯಕನಹಳ್ಳಿ ನ್ಯಾಯಾಲಯದಲ್ಲಿ ಇದೆ ಆದರೆ ಯಾವ ಜಮೀನಿಗೆ ಎಂದು ನನಗೆ ಗೊತ್ತಿಲ್ಲ. ಜಮೀನುಗಳಿಗೆ ಸಂಬಂಧಿಸಿದಂತೆ ಏನೇನು ತೀರ್ಮಾನವಾಗಿದೆ ನನಗೆ ಗೊತ್ತಿಲ್ಲ. ನಮ್ಮ ಊರಿನಿಂದ ಜಮೀನಿಗೆ ಕಾಲು ಕಿ.ಮಿಾ ದೂರ. ಶರತ್, ಮಂಜೇಶ್ ಮತ್ತು ಬಸವರಾಜು ಮೂರು ಜನರ ಮೇಲೆ ನಾನು ದೂರು ಕೊಟ್ಟಿದ್ದೆ. ಪೊಲೀಸರ ಮುಂದೆ ಕೊಟ್ಟಂತಹ ಹೇಳಿಕೆ ನಾನು ಓದಿ ತಿಳಿದುಕೊಂಡಿದ್ದೇನೆ. ನಾನು ಒಬ್ಬಳೇ ನೀರು ತಿರುವಲು ಹೋಗಿದ್ದು, ಬ್ಯಾರೆ ಮುಳ್ಳು ದಾರಿಗೆ ಹಾಕಿದ್ದನ್ನು ನನ್ನ ಮಗ ಫೋಟೋ ತೆಗೆದಿಲ್ಲ. ಗಲಾಟೆ ನಡೆಯುತ್ತಿದ್ದಾಗ ಪೊಲೀಸರಿಗೆ ಫೋನು ಮಾಡಿಲ್ಲ ಅವರ ನಂಬರ್ ನನ್ನ ಬಳಿ ಇರಲಿಲ್ಲ, ನನ್ನ ಬಳಿ ಆಗ ಸ್ಮಾರ್ಟ ಫೋನ್ ಇತ್ತು. ನನ್ನ ಬಳಿ ಆಗ ರೆಡ್‌ಮಿ ಇತ್ತು, ಮಾಡಲ್ ನೆನಪಲ್ಲ. *10-10* ಗಂಟೆ ಸಮಯಕ್ಕೆ ನಾನು ನನ್ನ ತಂದೆಗೆ ಫೋನ್ ಮಾಡಿದ್ದು. ನನ್ನ ಮೊಬೈಲ್ ನಂಬರ್ ನ್ನು ಪೊಲೀಸರಿಗೆ ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ. ಸುಮಾರು *5* ನಿಮಿಷಕ್ಕೆ ನನ್ನ ತಂದೆ ಬಂದರು. ಜಮೀನಿನ

ವಿಚಾರದಲ್ಲಿ ಆರೋಪಿತರ ಕುಟುಂಬದ ಮೇಲೆ ನನಗೆ ಮೊದಲಿನಿಂದ ದ್ವೇಷ ಇತ್ತು ಎಂದರೆ ಸರಿಯಲ್ಲ. ಮನಸ್ತಾಪ ಇತ್ತು. ಗಲಾಟೆಯಾದ ಜಮೀನಿನಲ್ಲಿ ಶುಂಠಿ ಹಾಕಿರಲಿಲ್ಲ ಪಕ್ಕದ ಜಮೀನಿನಲ್ಲಿ ಹಾಕಿದ್ದೆ. ಆ ಜಮೀನಿನಲ್ಲಿ ಇದ್ದ ಶುಂಠಿ ಬೆಳೆಯನ್ನೆಲ್ಲಾ ಹಾಳು ಮಾಡಿದ್ದರು, ಬೆಳೆಗೆ ನೀರು ಹೋಗದೇ ಇರುವ ರೀತಿ ಮಾಡಿದ್ದರು. ಬೆಳೆ ಹಾಳು ಮಾಡಿದ ಫೋಟೋ ತೆಗೆದಿಲ್ಲ, ಆಸ್ಪತ್ರೆಯಲ್ಲಿದ್ವಿ ಅದಕ್ಕೆ ತೆಗೆದಿಲ್ಲ. ಈ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ನನ್ನ ಅಜ್ಜಿ ಚನ್ನಮ್ಮ ದಾನಪತ್ರ ಬರೆದುಕೊಟ್ಟಿದ್ದರಿಂದ ನಾನು ಸುಳ್ಳು ದೂರನ್ನು ಆರೋಪಿತರ ವಿರುದ್ಧ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವತ್ತೂ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಾಣ ಬೆದರಿಕೆ ಹಾಕಿಲ್ಲ, ಮಾನಹಾನಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ಯಾವುದೇ ತೊಂದರೆ ಕೊಟ್ಟಿಲ್ಲ, ಕೊಲೆ ಬೆದರಿಕೆ ಸಹ ಹಾಕಿಲ್ಲ ಎಂದರೆ ಸರಿಯಲ್ಲ.

ಚಿಕ್ಕನಾಯಕನಹಳ್ಳಿ ಆಸ್ಪತ್ರೆಗೆ 2 ಗಂಟೆಗೆ ಹೋಗಿದ್ವಿ . ಹುಳಿಯಾರಿಗೆ 12 ಗಂಟೆಗೆ ಹೋಗಿದ್ವಿ ಕುಮಾರಯ್ಯ ನಮ್ಮ ಊರಿನವರೇ, ಮಹಾಲಿಂಗಯ್ಯ ಉಪಾರಹಳ್ಳಿಯವರು, ನಮ್ಮ ಮನೆಯ ಹಿಂದೆ ಬಾತ್ ರೂಮ್ ಕಟ್ಟಿಸಲು ಕರೆಸಿದ್ವಿ ನನ್ನ ತಂದೆ ಘಟನೆ ನಡೆದ ಸ್ಥಳಕ್ಕೆ ಟ್ರಾಕ್ಟರ್ ನಲ್ಲಿ ಬಂದಿದ್ದರು, ನಾನು ಬೈಕಿನಲ್ಲಿ ಬಂದಿದ್ದೆ ಆದ್ದರಿಂದ ಅವರು ಬೇರೆ ವಾಹನ ಇಲ್ಲದಿದ್ದರಿಂದ ಅವರು ಟ್ರಾಕ್ಟರ್ ನಲ್ಲಿ ಬಂದಿದ್ದರು. ಸುಮಾರು 11 ಗಂಟೆ ಸಮಯಕ್ಕೆ ಘಟನೆ ನಂತರ ಮನೆಗೆ ಹೋಗಿದ್ದೆವು.

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಪುಷ್ಪಾವತಿ.ವಿ)**
**5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**